**ಸಾಕ್ಷಿಯನ್ನು ದಿನಾಂಕ 01.12.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ ಎಸ್.ಕೆ ವಕೀಲರಿಂದಃ**

1. ವಾದಿ ಈರಮ್ಮರವರಿಗೆ ಸರ್ಕಾರದವರು ಮಂಜೂರು ಮಾಡಿರುವ ಆಸ್ತಿ ಎಲ್ಲಿದೆ ಎಂದು ತೋರಿಸುವ ದಾಖಲೆಗಳನ್ನು ನಾನು ನೋಡಿದ್ದೇನೆ. ಏನು ದಾಖಲೆಗಳನ್ನು ನೋಡಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಪಹಣಿ ನೋಡಿದ್ದೇನೆ ಎನ್ನುತ್ತಾರೆ. 1 ನೇ ಪ್ರತಿವಾದಿಗೆ ಸಂಬಂಧಪಟ್ಟ ಜಮೀನಿನ ಪಹಣಿಗಳನ್ನು ನಾನು ನೋಡಿಲ್ಲ. ದಾವಾ ಸರ್ವೇ ನಂ. 31 ರಲ್ಲಿ ಒಟ್ಟಾರೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಗೆ ಯಾವಾಗ ಜಮೀನು ಮಂಜೂರಾತಿಯಾಗಿದೆ ಎಂದು ನನಗೆ ಗೊತ್ತಿಲ್ಲ. ಆಕೆಯ ಹೆಸರಿಗೆ ಇರುವ ಪಹಣಿಯನ್ನು ನಾನು ನೋಡದೇ ಇರುವುದರಿಂದ ಆಕೆಗೆ ಜಮೀನು ಮಂಜೂರಾಗಿರುವ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ವಾದಿಗೆ ಸಂಬಂಧಪಟ್ಟ ಪಹಣಿಯನ್ನು ನಾನು ನೋಡಿರುವುದರಿಂದ ಆಕೆಗೆ ಜಮೀನು ಮಂಜೂರಾಗಿದೆ ಎಂದು ಹೇಳುತ್ತಿದ್ದೇನೆ ಎಂದರೆ ಸರಿ.
2. 1 ನೇ ಪ್ರತಿವಾದಿಯ ಗಂಡನ ಹೆಸರು ನನಗೆ ಗೊತ್ತಿಲ್ಲ. ಆಕೆಯನ್ನು ತಿಮ್ಮಕ್ಕ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ. ಆಕೆಯ ಗಂಡನ ಹೆಸರು ರಾಮಚಂದ್ರಪ್ಪ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಸರ್ವೇ ನಂ. 31/29 ರಲ್ಲಿ ಈಗ ನನಗೆ ತೋರಿಸಲಾದ ದಾಖಲೆ ಪ್ರಕಾರ 20 ಗುಂಟೆ ಜಮೀನು ಮಂಜೂರಾತಿ ಪತ್ರ ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಕೊಟ್ಟಿರಬಹುದು ಎನ್ನುತ್ತಾರೆ. ಸದರಿ ಜಮೀನಿನ ಪಹಣಿ 1 ನೇ ಪ್ರತಿವಾದಿಯ

ಹೆಸರಿಗೆ ಇದೆ ಎಂದರೆ ಇರಬಹುದು. ವಾದಿಗೆ ದಾವಾ ಸರ್ವೇ ನಂಬರಿನಲ್ಲಿ ಜಮೀನು ಮಂಜೂರಾದಂತಹ 1 ನೇ ಪ್ರತಿವಾದಿಗೆ ಮಂಜೂರಾಗಿದೆ ಎಂದರೆ ಸಾಕ್ಷಿ ಇರಬಹುದು ಎನ್ನುತ್ತಾರೆ. ಮಂಜೂರಾತಿ ಪತ್ರವನ್ನು ವಿತರಿಸುವ ಮೊದಲು ಸ್ವಾಧೀನ ಎಲ್ಲಿದೆ ಎಂದು ಗುರುತಿಸಿ ನಕಾಶೆ ತಯಾರಿಸುತ್ತಾರೆ ಎಂದರೆ ಸರಿ. ವಾದಿಗೆ ದಾವಾ ಸ್ವತ್ತನ್ನು ಮಂಜೂರು ಮಾಡುವ ಮೊದಲು ಅದು ಎಲ್ಲಿದೆ ಎಂದು ಗುರುತಿಸಲಾಗಿದೆ ಎಂದರೆ ಸಾಕ್ಷಿಯು ಆ ರೀತಿ ಗುರುತಿಸಿಲ್ಲ ಎನ್ನುತ್ತಾರೆ.

3. ವಾದಿ ಮತ್ತು ಪ್ರತಿವಾದಿಯರಿಗೆ ಮಂಜುರಾಗಿರುವ ಜಮೀನುಗಳು ಬೇರೆ ಬೇರೆ ಎಂದರೆ ಸರಿ. ವಾದಿಯ ಅಣ್ಣ ತಮ್ಮಂದಿರು ತಮ್ಮ ಆಸ್ತಿಗಳನ್ನು ಪಾಲು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿ. ಅವರ ಜಮೀನುಗಳು ಪೋಡಿಯಾಗದ ಕಾರಣ ಪಾಲು ವಿಭಾಗದ ಸಂದರ್ಭದಲ್ಲಿ ಅಳತೆಯನ್ನು ನಿಖರವಾಗಿ ಮಾಡಿಲ್ಲ ಎಂದರೆ ಸರಿ. ಪಾಲು ವಿಭಾಗದಲ್ಲಿ ವಾದಿಯ ಗಂಡನಿಗೆ ಎಷ್ಟು ವಿಸ್ತೀರ್ಣದ ಜಮೀನು ಬಂದಿದೆ ಎಂದು ನಿಖರವಾಗಿ ನನಗೆ ಗೊತ್ತಿಲ್ಲ ಎಂದರೆ ಸರಿ.

4. ಆಂಗ್ಲ ಭಾಷೆಯಲ್ಲಿ ಬರೆಯಲಾಗಿರುವ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ವಾದಿಯ ಮಗ ವಸಂತರವರು ಬರೆಸಿದ್ದಾರೆ ಎಂದರೆ ಸರಿ. ದಾವಾ ಸರ್ವೇ ನಂ. 31 ರಲ್ಲಿ ವಾದಿ ಮತ್ತು 1 ನೇ ಪ್ರತಿವಾದಿಗೆ ಮಂಜೂರಾಗಿರುವ 2 ಪ್ರತ್ಯೇಕ ಜಮೀನುಗಳನ್ನು ಅವರವರೇ ಪ್ರತ್ಯೇಕವಾಗಿ ಸ್ವಾಧೀನದಲ್ಲಿ ಇದ್ದಾರೆ ಎನ್ನುವುದು ಸರಿಯಲ್ಲ. 1 ನೇ ಪ್ರತಿವಾದಿಗೆ ಯಾವಾಗ ಮತ್ತು ಎಲ್ಲಿ ಜಮೀನು ಮಂಜೂರು ಮಾಡಲಾಗಿದೆ ಹಾಗೂ ಆಕೆಯ

ಜಮೀನಿಗೆ ಸಂಬಂಧಪಟ್ಟ ದಾಖಲೆಗಳ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ. 1 ನೇ ಪ್ರತಿವಾದಿಯ ಹೆಸರಿಗೆ ಇರುವ ಯಾವುದೇ ದಾಖಲೆಯನ್ನು ನಾನು ನೋಡದೇ ಇರುವುದರಿಂದ ಆಕೆಗೆ ಯಾವುದೇ ಜಮೀನು ಮಂಜೂರಾಗಿಲ್ಲ ಎಂದು ಹೇಳುತ್ತಿದ್ದೇನೆ ಎಂದರೆ ಸರಿ.

5. ನಾನು ವಾದಿ ಮತ್ತು ಆಕೆಯ ಮಗ ಒಂದೇ ರಾಜಕೀಯ ಪಕ್ಷದ ಬೆಂಬಲಿಗರು ಎಂದರೆ ಸರಿ. ವಾದಿಯ ಮಗ ನನ್ನ ಸ್ನೇಹಿತ ಎಂದರೆ ಸಾಕ್ಷಿಯೂ ಪ್ರತಿವಾದಿಯರೂ ಸಹ ನನ್ನ ಸ್ನೇಹಿತರು ಎನ್ನುತ್ತಾರೆ. ವಾದಿ ಪ್ರತಿವಾದಿಯರ ನಡುವೆ ಯಾವುದೇ ಗಲಾಟೆಯಾಗಿಲ್ಲ. 1 ನೇ ಪ್ರತಿವಾದಿಗೆ ಆರೋಗ್ಯ ಸರಿ ಇಲ್ಲ ಮತ್ತು ಅವರು ತೊದಲು ಮಾತನಾಡುತ್ತಾರೆ ಎಂದರೆ ಸರಿ. 2 ನೇ ಪ್ರತಿವಾದಿ ಬೇರೆ ಊರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯ ಅನಾರೋಗ್ಯ ಮತ್ತು 2 ನೇ ಪ್ರತಿವಾದಿ ಬೇರೆ ಊರಿನಲ್ಲಿರುವ ಸಂದರ್ಭವನ್ನು ದುರುಪಯೋಗ ಪಡಿಸಿಕೊಂಡಿರುವ ವಾದಿ ಮತ್ತು ಆಕೆಯ ಮಗ ಅವರಿಗೆ ಸೇರಿದ ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸುತ್ತಿದ್ದಾರೆ ಎಂದರೆ ಸರಿಯಲ್ಲ. ಈ ಸಂಬಂಧ ಹೊಳೆಹೊನ್ನೂರಿನ ಪೋಲೀಸ್ ಠಾಣೆಗೆ ಪ್ರತಿವಾದಿಯರು ದೂರು ಕೊಟ್ಟಿದ್ದರು ಎಂದರೆ ಸರಿ.

6. ದಾವಾ ಸ್ವತ್ತಿನ ಸ್ವಾಧೀನ ಮತ್ತು ಮಾಲೀಕತ್ವದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಸಹ ನನ್ನ ಸ್ನೇಹಿತನಾದ ವಸಂತನಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಗೆ ದಾವಾ ಸರ್ವೇ ನಂ.

ಮಂಜೂರಾಗಿರುವ ಆಸ್ತಿಯನ್ನು ಅವರೇ ಅನುಭವಿಸುತ್ತಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವಾಧೀನಕ್ಕೆ ಪ್ರತಿವಾದಿಯರು ಯಾವತ್ತೂ ತೊಂದರೆ ಕೊಟ್ಟಿಲ್ಲ ಎಂದರೆ ಸರಿ.

ಮರುವಿಚಾರಣೆಃ ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**
**ಭದ್ರಾವತಿ.**